# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ – 590 018
ರಾಷ್ಟ್ರೀಯ ಸೇವಾ ಯೋಜನೆ

ದೂರವಾಣಿ ಸಂ : 0831–2405468
ಕುಲಸಚಿವರು
ಫ್ಯಾಕ್ಸ್ ಸಂ : 0831–2405467

ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ವಿ.ವಾ.ಶಿ–ದೈ.ಚ/03-27/2018-19/ 360 ದಿನಾಂಕ: 16 APR 2019

ಅತೀ ಜರೂರು

**:ನೆನಪೋಲೆ:–1**

**ವಿಷಯು: 2018-19ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರ ಮತ್ತು ದೈನಂದಿನ ಚಟುವಟಿಕೆಯ ಅನುದಾನ ಉಪಯೋಗಿಸುವ ಕುರಿತು.**

ಉಲ್ಲೇಖ: ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ವಿ.ವಾ.ಶಿ–ದೈ.ಚ/03-27/2018-19/ 9616 ದಿನಾಂಕ: 31/01/2019

ರಾಜ್ಯ ಎನ್.ಎಸ್.ಎಸ್. ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಂಗಳೂರು, ಇವರು ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ 2018-19ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರ ಮತ್ತು ದೈನಂದಿನ ಚಟುವಟಿಕೆಗಳನ್ನು ಆಯೋಜಿಸಲು ಅನುದಾನ ಮಂಜೂರು ಮಾಡಿದ್ದು. ಅದರಂತೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ರಾ.ಸೇ.ಯೋ ಕೋಶ 2018-19ನೇ ಸಾಲಿನ ವಿಶೇಷ ವಾರ್ಷಿಕ ಶಿಬಿರಕ್ಕೆ ರೂ.22,500/–ಮತ್ತು ದೈನಂದಿನ ಚಟುವಟಿಕೆಗಳಿಗೆ ರೂ.16,000/–ಗಳನ್ನು ಜೂನ್ ಮತ್ತು ಜುಲೈ 2018ರಲ್ಲಿ ವಿ.ತಾ.ವಿ. ಅಧೀನಕ್ಕೊಳಪಡುವ ಮಹಾವಿದ್ಯಾಲಯಗಳ ರಾ.ಸೇ.ಯೋ.ಘಟಕಗಳಿಗೆ ಬಿಡುಗಡೆ ಮಾಡಿದ್ದು. **ಸದರಿ ಅನುದಾನ ಪಡೆದ ಮಹಾವಿದ್ಯಾಲಯಗಳು ಲೆಕ್ಕಪತ್ರ ವರದಿಯನ್ನು, ಸಂಬಂಧಪಟ್ಟ ಮೂಲ ರಶೀದಿಗಳು, ಛಾಯಾ ಚಿತ್ರಗಳನ್ನೊಳಗೊಂಡಂತೆ, ಆಮಂತ್ರಣ ಪತ್ರಿಕೆ, ಮತ್ತು ಸ್ವಯಂ ಸೇವಕ/ಸೇವಕಿಯರ ಹಾಜರಾತಿ ಪ್ರತಿಯನ್ನು ಲಗತ್ತಿಸಿ ಕಡ್ಡಾಯವಾಗಿ ಸ್ಪೈರಲ್ ಬೈಂಡಿಂಗ್ ಮಾಡಿಸಿ** ವಿ.ತಾ.ವಿ. ರಾ.ಸೇ.ಯೋ. ಕೋಶ ಬೆಳಗಾವಿಗೆ 15/05/2019ರ ಒಳಗೆ ಸಲ್ಲಿಸಲು ಕೋರಲಾಗಿದೆ. ಹಾಗೂ ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಗಳಿಗೆ ಎರಡು ಪ್ರತ್ಯೇಕ ವರದಿಯನ್ನು ಸಲ್ಲಿಸುವಂತೆ ಸೂಚಿಸಲು ತಮ್ಮಲ್ಲಿ ಕೋರಲಾಗಿದೆ.

ಮುಂದುವರೆದು, ಲೆಕ್ಕಪತ್ರ ವರದಿಯನ್ನು ಸಲ್ಲಿಸದೆ ಇದ್ದ ಪಕ್ಷದಲ್ಲಿ ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿಗಳ *ಕೈ ವೆಚ್ಚ* – OPA (Out-of-Pocket Allowance) ವನ್ನು ಪಾವತಿಸಲಾಗುವುದಿಲ್ಲಾ.

**ವಿಶೇಷ ಸೂಚನೆ:** ಉಪಯೋಗಿಸದೆ ಇದ್ದ ಅನುದಾನವನ್ನು ಸೂಕ್ತ ಕಾರಣದೊಂದಿಗೆ ಹಣಕಾಸು ಅಧಿಕಾರಿಗಳು ವಿತಾವಿ., ಬೆಳಗಾವಿ (Finance Officer, VTU, Belagavi) ಇವರ ಹೆಸರಿನಲ್ಲಿ ಡಿಡಿ/ಚೆಕ್ ಮೂಲಕ ದಿನಾಂಕ: 20/05/2019ರ ಒಳಗೆ ಮರಳಿಸಲು ಸೂಚಿಸಲಾಗಿದೆ.

ವಂದನೆಗಳೊಂದಿಗೆ,

ಕುಲಸಚಿವರು

**ಇವರಿಗೆ,**

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು, ವಿ.ತಾ.ವಿ. ಅಧೀನಕ್ಕೊಳಪಡುವ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
3. ನಿರ್ದೇಶಕರು ಎನ್.ಎಸ್.ಎಸ್. ಪ್ರಾದೇಶಿಕ ಕೇಂದ್ರ ಕಛೇರಿ, ಬೆಂಗಳೂರು.
4. ಮಹಾವಿದ್ಯಾಲಯಗಳ ರಾ.ಸೇ.ಯೋ ಕಾರ್ಯಕ್ರಮಾಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
5. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ನೆನಪೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
6. ಕಛೇರಿ ಪ್ರತಿ.